ಬರುವುದಿಲ್ಲ, ಅಥವಾ ಕನಿಷ್ಟಪಕ್ಷ ನಲ್ವತ್ತು ಹೆಕ್ಟೇರ್‌ಗಿಂತ ಹೆಚ್ಚು ನೀರಾವರಿ ಆಗುತ್ತದೆ ಎನ್ನತಕ್ಕಂಥ ಯಾವುದಾದರೂ ಪ್ರಾಂತ್ಯ ಅಥವಾ ಭಾಗ ಇದ್ದರೆ ಅಂತಹ ಕಡೆ ಕೆಲಸಗಳನ್ನು ತೆಗೆದುಕೊಳ್ಳಬಹುದು. ಅದಕ್ಕಾಗಿ ಸಣ್ಣಮಟ್ಟ ಕೆರೆಗಳು ಜಿಲ್ಲಾ ಪಂಚಾಯತ್‌ಗೆ ಬರುವುದರಿಂದ ತಾವು ಜಿಲ್ಲಾ ಪಂಚಾಯತ್‌ಗೆ ಇದನ್ನು ಕೇಳಬೇಕು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ಮಂತ್ರಿಗಳ ಉತ್ತರದಲ್ಲಿ ಆರು ಕೆರೆಗಳನ್ನು ಭಾಗಶಃ ಹೊಳೆತ್ತಿ ದುರಸ್ಥಿಗೊಳಿಸಲಾಗಿದೆ ಎಂದು ಹೇಳುತ್ತಾರೆ. ಇದು ಭಾಗಶಃ ಮಾತ್ರ ಮಾಡಿದ್ದಾರೆ. ಏಕೆಂದರೆ ನನ್ನ ಕ್ಷೇತ್ರದಲ್ಲಿ ಶಾಂತಾರು ಮಾರ್ಗ ಅಂತ ಇದೆ. ಅದು ಐವತ್ತು ಲಕ್ಷ ರೂಪಾಯಿಗಳದ್ದು ಪ್ರಸ್ತಾವನೆ ಬಂದಿದೆ. ಅದರಲ್ಲಿ ಹದಿನೆಂಟು ಲಕ್ಷದಲ್ಲಿ ಬೇರೆಬೇರೆ ಕಾಂಪೊನೆಂಟ್ಸ್ ಎಲ್ಲಾ ಇದೆ. ಉಳಿದ ಭಾಗಕ್ಕೆ ನಲನಾಡು, ಶಾಂತಾರು ಇಂತಹ ಉಳಿದ ಕಡೆ ಹೂಳು ಎತ್ತಲಿಕ್ಕೆ ಯಾವಾಗ ಹಣ ಒದಗಿಸುತ್ತೀರಿ ಎಂದು ನಾನು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಜಯಪ್ರಕಾಶ್ ಹೆಗ್ಡೆಯವರಿಗೂ ಗೊತ್ತಿದೆ. ಒಂದೊಂದು ಕೆರೆಯ ಹೂಳು ಎತ್ತಬೇಕು ಎಂದರೆ ಕನಿಷ್ಟ ಲಕ್ಷಾಂತರ ರೂಪಾಯಿ ಬೇಕಾಗುತ್ತದೆ. economically ಅದು feasible ಆಗುವುದಿಲ್ಲ. ಆದರೂ ಕೂಡ ಬರಗಾಲ ಕಾಮಗಾರಿಯಲ್ಲಿ ಅಲ್ಲಿ ಇಲ್ಲಿ ಏನು ವೇಸ್ಟ್ ಆಗುತ್ತದೆ ಅದಕ್ಕಿಂತಲೂ ಈ ಸಣ್ಣ ನೀರಾವರಿ ಆಸ್ಥಿಯನ್ನು ಉಳಿಸಿಕೊಳ್ಳಬೇಕು. ಆದಷ್ಟು ಇವನ್ನು ದುರಸ್ಥಿ ಮಾಡಬೇಕೆಂದು ಹೇಳಿ ಎಷ್ಟು ಹಣ ಇಟ್ಟಿದ್ದೇವೆ ಅದನ್ನು ಪರಿಣಾಮಕಾರಿಯಾಗಿ ಉಪಯೋಗ ಮಾಡುವ ಯೋಚನೆ ಮಾಡಿದ್ದು ಅವನ್ನು ಕಂಪ್ಲೀಟ್ ಮಾಡಬೇಕಾಗಿದ್ದರೆ ಹೆಚ್ಚಿಗೆ ಹಣ ಪ್ರಾವಿಸನ್ ಮಾಡಬೇಕಾಗುತ್ತದೆ. ಅದಕ್ಕಾಗಿ ಇಷ್ಟೊಂದು ಹಣದ ಕೊರತೆಯೂ ಇದೆ. ಒಂದು ಯೋಜನೆ ನಮ್ಮ ಮುಂದಿದೆ. ಅದು ಏನೆಂದರೆ ಸಣ್ಣ ನೀರಾವರಿ ನಿಗಮವೆಂದು ಮಾಡಿ ಹೆಚ್ಚಿಗೆ ಹಣ ಸಂಗ್ರಹಿಸಿ ಅಂತಹ ಕೆಲಸಗಳನ್ನು ಪೂರ್ಣಗೊಳಿಸತಕ್ಕಂಥಾದ್ದನ್ನು ಮಾಡಬೇಕು ಎನ್ನತಕ್ಕಂಥ ಒಂದು ಆಲೋಚನೆ ಇದೆ. ಬಹುಶಃ ಅದಕ್ಕೇನಾದರೂ ಹಣಕಾಸಿನ ವ್ಯವಸ್ಥೆಯಾದರೆ ಅಂತಹ ಅಪೂರ್ಣವಾದಂಥ ಕೆಲಸಗಳನ್ನು ಪೂರ್ಣ ಮಾಡತಕ್ಕಂಥಾದ್ದನ್ನು ಮಾಡಬಹುದು.

ಪ್ರಶ್ನೆ : 41(312)– ಮಾನ್ಯ ಸದಸ್ಯರಾದ ಶ್ರೀ ಎ. ನಾರಾಯಣಸ್ವಾಮಿ ಅವರು ಗೈರುಹಾಜರಿದ್ದರು.

ಹೊನ್ನಾವರ ಬಳಿ ಶರಾವತಿ ನದಿಗೆ ಅಡ್ಡವಾಗಿ ನಿರ್ಮಿಸಿರುವ ಸೇತುವೆ ಕುರಿತು

42 (282): ಶ್ರೀ ಶಿವಾನಂದ ನಾಯ್ಕ (ಭಟ್ಕಳ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹೊನ್ನಾವರ ಬಳಿ ಶರಾವತಿ ನದಿಗೆ ಅಡ್ಡಲಾಗಿ ಸೇತುವೆ ಯಾವಾಗ ನಿರ್ಮಿಸಲಾಯಿತು! ಈ ಸೇತುವೆ ನಿರ್ಮಾಣಕ್ಕೆ ಆದ ವೆಚ್ಚ ಎಷ್ಟು;

ಆ) ನಿರ್ಮಾಣ ಪೂರ್ಣಗೊಳಿಸಿದ ವರ್ಷದಿಂದ ಇಲ್ಲಿಯವರೆಗೆ ಸೇತುವೆ ದುರಸ್ತಿಗಾಗಿ ತಗುಲಿದ ವರ್ಷವಾರು ವೆಚ್ಚವೆಷ್ಟು!

ಇ) ಸೇತುವೆ ದುರಸ್ತಿ ಕಾರ್ಯಗಳಿಗಾಗಿ ಹಾಕಿರುವ ಕಮಾನು ಯಾವಾಗ ತೆಗೆಯಲಾಗುವುದು!

ಈ) ಗರಿಷ್ಟ ಎಷ್ಟು ಟನ್ ತೂಕದ ವಾಹನಗಳು ಸೇತುವೆ ಮೇಲೆ ಓಡಾಡಲು ಅನುಮತಿ ನೀಡಲಾಗಿದೆ!

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಶರಾವತಿ ಸೇತುವೆಯು 1970ನೇ ಇಸವಿಯಲ್ಲಿ ನಿರ್ಮಿಸಲಾಯಿತು. ಈ ಸೇತುವೆ ನಿರ್ಮಾಣಕ್ಕೆ ರೂ. 112/– ಲಕ್ಷಗಳು ವೆಚ್ಚವಾಗಿರುತ್ತದೆ.

ಆ) ನಿರ್ಮಾಣ ಪೂರ್ಣಗೊಳಿಸಿದ ವರ್ಷದಿಂದ ಇಲ್ಲಿಯವರೆಗೆ ಸೇತುವೆ ದುರಸ್ತಿಗಾಗಿ ತಗುಲಿದ ವರ್ಷವಾರು ಈ ಕೆಳಗಿನಂತಿದೆ:

	ರೂ.ಗಳಲ್ಲಿ
1995–96	3547512.00
1996–97	28844840.0
1997–98	48123195.00
1998–99	20191589.00
1999–2000	1389801.00
2000–2001	3074.00
ಒಟ್ಟು	**10,21,00,021.00**

ಇ) ಸೇತುವೆಗೆ ಹಾಕಿರುವ ಕಮಾನು ತೆಗೆಯಲು ಹರಾಜು ಪ್ರಕ್ರಿಯೆ ನಡೆಸಿದ್ದು ಸಧ್ಯದಲ್ಲೇ ಕಮಾನನ್ನು ತೆಗೆಯಲಾಗುವುದು.

ಈ) ಶರಾವತಿ ಸೇತುವೆಯ ಮೇಲೆ ಸಿಂಗಲ್ ಆಕ್ಸಲ್‌ಗೆ 10.2. ಮೆ.ಟನ್ ಡಬಲ್ ಆಕ್ಸಲ್‌ಗೆ 18 ಮೆ. ಟನ್ ತ್ರಿಬಲ್ ಆಕ್ಸಲ್‌ಗೆ 35 ಮೆ. ಟನ್ ಹಾಗೂ 5 ಆಕ್ಸಲ್‌ಗೆ 55 ಮೆ.ಟನ್ ಭಾರದ ವಾಹನಗಳು ಓಡಾಟಕ್ಕೆ ಅನುಮತಿ ಇದೆ.

ಪ್ರಶ್ನೆ ಸಂಖ್ಯೆ 42(282)

ಶ್ರೀ ಶಿವಾನಂದ ನಾಯ್ಕ : ಮಾನ್ಯ ಅಧ್ಯಕ್ಷರೇ, ಉತ್ತರವನ್ನು ಕೊಟ್ಟಿದ್ದಾರೆ. ಇಲ್ಲಿ ಗಮನಿಸಬೇಕಾದಂಥ ವಿಷಯ ಏನೆಂದರೆ, ಈ ಒಂದು ಹೊಸ ಸೇತುವೆಯನ್ನು ನಿರ್ಮಾಣ ಮಾಡಲಿಕ್ಕೆ 112 ಲಕ್ಷ ರೂಪಾಯಿ ವೆಚ್ಚವಾಗಿದೆ. ಆದರೆ ಇದನ್ನು ದುರಸ್ಥಿ ಮಾಡುವುದಕ್ಕೆ 10 ಕೋಟಿ 21 ಲಕ್ಷ ರೂಪಾಯಿ ವೆಚ್ಚವಾಗಿದೆ. ಮತ್ತು ಈ ಒಂದು ಸೇತುವೆ ನಿರ್ಮಾಣವಾದ 25 ವರ್ಷಕ್ಕೆ ದುರಸ್ಥಿಗೆ ಬಂದಿದೆ. ಇದರ ಮಹತ್ವ ಎಷ್ಟಿದೆ ಎಂದರೆ, ಇದು ಮಂಗಳೂರು, ಕೇರಳ, ಗೋವಾ, ಮಹಾರಾಷ್ಟ್ರ ಮತ್ತು ಗುಜರಾತ್ ಈ ಭಾಗದಲ್ಲಿ ಓಡಾಡತಕ್ಕಂಥ ಎಲ್ಲಾ ವಾಹನಗಳಿಗೂ ಒಂದು ರೀತಿ ಕೊಂಡಿ ಇದ್ದಹಾಗೆ, ಇದು ರಾಷ್ಟ್ರೀಯ ಹೆದ್ದಾರಿ. ಹಿಂದೆ ದುರಸ್ಥಿ ಸಂದರ್ಭದಲ್ಲಿ ಮೂರು ವರ್ಷಕಾಲ ಈ ಸೇತುವೆ ಬಂದ್ ಇದ್ದು ಬಾರ್ಜ್ ಮೇಲೆ ಓಡಾಡುವಂಥ ವ್ಯವಸ್ಥೆಯನ್ನು ಮಾಡಿದ್ದರು. ಈಗ ಪುನಃ ಅವರು ಹೇಳಿದ ಹಾಗೆ 55 ಟನ್ ತನಕ ಭಾರಿ ವಾಹನಗಳು ಈ ಸೇತುವೆ ಮೇಲೆ ಓಡಾಡುತ್ತಿವೆ. ಮುಂದೆ ಈ ಸೇತುವೆಗೆ ಪುನಃ ದುರಸ್ಥಿ ಬರುವಂತಹ ವ್ಯವಸ್ಥೆಯಾಗಬಹುದು. ಆದ್ದರಿಂದ ತಕ್ಷಣ

ಈ ರೀತಿಯ ಭಾರಿ ವಾಹನಗಳ ಓಡಾಟವನ್ನು ನಿಲ್ಲಿಸಿದರೆ ಮುಂದೆ ಈ ಒಂದು ಅನಾಹುತ ಆಗದಹಾಗೆ ತಡೆಯುವುದಕ್ಕೆ ಸಾಧ್ಯವಾಗಬಹುದು. ಮತ್ತೆ ಅವರು ಹೇಳಿದಹಾಗೆ 55 ಟನ್‌ಗೆ ಸೀಮಿತವಾಧ ವಾಹನಗಳಷ್ಟೇ ಓಡಾಡುತ್ತಿಲ್ಲ. ಈ ಸೇತುವೆಯ ಎರಡು ಕಡೆಗೂ ವೇಬ್ರಿಡ್ಜ್ ಇಲ್ಲ. ಇವತ್ತು ಅಲ್ಲಿ 60–70 ಟನ್ ತೂಕದ ಮ್ಯಾಂಗನೀಸ್ ತುಂಬಿದ ವಾಹನಗಳು ಓಡಾಡುತ್ತಿವೆ. ಇದನ್ನೆಲ್ಲಾ ತಡೆಯುವಂತಹ ಕೆಲಸ ಇವತ್ತು ಆಗಬೇಕಾಗಿದೆ. ಎರಡೂ ಭಾಗದಲ್ಲೂ ವೇಬ್ರಿಡ್ಜ್‌ನ ನಿರ್ಮಾಣವನ್ನು ಮಾಡಬೇಕು. ಮತ್ತು 55 ಟನ್‌ಗಿಂತ ಭಾರಿ ಇರುವ ವಾಹನಗಳನ್ನು ತಡೆದು ತಕ್ಷಣ ಅವರು ಸಂಬಂಧಪಟ್ಟವರಿಂದ ಎಲ್ಲಿಯ ತನಕ ಆ ಬ್ರಿಡ್ಜ್‌ನಲ್ಲಿ ಎಷ್ಟು ತೂಕದ ವಾಹನಗಳನ್ನು ಓಡಿಸಬಹುದು ಎನ್ನುವುದರ ಬಗ್ಗೆ ಮಾಹಿತಿಯನ್ನು ತೆಗೆದುಕೊಳ್ಳಬೇಕು. ಏಕೆ ಈ ವಿಷಯವನ್ನು ನಾನು ಪ್ರಸ್ತಾಪ ಮಾಡುತ್ತಿದ್ದೇನೆ ಎಂದರೆ, ಇದೇ ಸೇತುವೆಯನ್ನು ನಿರ್ಮಾಣ ಮಾಡಿದಂತೆ ಇದೇ ಗುತ್ತಿಗೆದಾರರು ಗೋವಾದಲ್ಲಿ ಅದೇ ವರ್ಷದಲ್ಲಿ ಮಾಂಡೋವಿ ಸೇತುವೆಯನ್ನೂ ಕೂಡ ನಿರ್ಮಾಣ ಮಾಡಿದ್ದರು. ಆ ಸೇತುವೆ ಈಗಾಗಲೇ ಮುರಿದುಬಿದ್ದು ಹತ್ತಾರು ಜನ ಮೃತಪಟ್ಟಿದ್ದಾರೆ. ಆದ್ದರಿಂದ ಮುಂದಿನ ದಿನಗಳಲ್ಲಿ ಈ ಭಾಗದ ಜನರಿಗೆ ಸಮಸ್ಯೆ ಬರಬಹುದು. ಆದಕಾರಣ ಇದರ ಬಗ್ಗೆ ತಕ್ಷಣ ಸರ್ಕಾರ ಗಮನಿಸಬೇಕು. ಭಾರಿ ವಾಹನಗಳ ಓಡಾಟವನ್ನು ತಡೆಯುವ ಕೆಲಸವನ್ನು ಮೊದಲು ಮಾಡಬೇಕು. ಇನ್ನೊಂದು ವಿಷಯವೆಂದರೆ ದುರಸ್ಥಿತಿ ಸಂದರ್ಭದಲ್ಲಿ ಕಮಾನುಗಳನ್ನು ನಿರ್ಮಿಸಿದ್ದರು ಮತ್ತು ಇದನ್ನು ಮಾಡಿ ಎಂಟು ವರ್ಷವಾಯಿತು. ಇನ್ನೂ ತನಕ ಅದನ್ನು ತೆಗೆದಿಲ್ಲ. ತಾವು ಇದಕ್ಕೆ ಇನ್ನಷ್ಟು ಸಮಯ ಕೇಳಿದ್ದೀರಿ. ಇದನ್ನು ಯಾವಾಗ ತೆಗೆಯುತ್ತೀರಿ ಎಂದು ಸ್ಪಷ್ಟವಾದ ಉತ್ತರವನ್ನು ಕೊಡಬೇಕೆಂದು ತಮ್ಮ ಮೂಲಕ ನಾನು ಸಚಿವರನ್ನು ಕೇಳುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೇ, ಈಗ ಟೋಲ್‌ನ್ನು ತೆಗೆಯತಕ್ಕಂಥ ಪ್ರಶ್ನೆಯೇ ಇಲ್ಲ. ಏಕೆಂದರೆ ಈಗಾಗಲೇ ಸುಮಾರು 10 ಕೋಟಿ 21 ಲಕ್ಷ ರೂಪಾಯಿಗಳನ್ನು ನಾವು ಖರ್ಚು ಮಾಡಿದ್ದೇವೆ. ಆದರೆ ಟೋಲ್‌ನಲ್ಲಿ ಕಳೆದ ಆರುವರ್ಷಗಳಲ್ಲಿ ಇದುವರೆಗೆ ಸುಮಾರು 6 ಕೋಟಿ 58 ಲಕ್ಷ ರೂಪಾಯಿ ಬಂದಿದೆ. ಬಾಕಿ ಉಳಿಕೆ ಹಣವೂ ಬರಬೇಕಾಗಿದೆ. ಆದರೆ ಇದು ಏನು ಹಣ ವಸೂಸಲಾಗುತ್ತದೆ. ಅದು ಸರ್ಕಾರಕ್ಕೇ ಬರುತ್ತದೆ. ಅದು ರಾಜ್ಯಸರ್ಕಾರಕ್ಕೆ ಬರುವುದರಿಂದ ಟೋಲ್‌ನ್ನು ತೆಗೆಯುವ ಪ್ರಶ್ನೆ ಇಲ್ಲ ಮತ್ತು ಟೋಲ್‌ನ್ನು ಮುಂದುವರೆಸುತ್ತೇವೆ. ಮತ್ತೆ ತಾವು ಇಲ್ಲಿ ಭಾರಿ ವಾಹನಗಳು ಓಡಾಡುತ್ತಿವೆ ಎಂದು ಹೇಳಿದ್ದೀರಿ. ಇದರ ಬಗ್ಗೆ ಪರಿಶೀಲನೆ ಮಾಡಿ ಸಂಬಂಧಪಟ್ಟವರಿಗೆ ಸೂಚನೆಯನ್ನು ನಾನು ಕೊಡುತ್ತೇನೆ. ಏಕೆಂದರೆ ನನ್ನ ಇಲಾಖೆಗೆ ಈ ವಾಹನಗಳದ್ದು ಬರುವುದಿಲ್ಲ.

ಶ್ರೀ ಶಿವಾನಂದ ನಾಯ್ಕ : ಟೋಲ್ ಬಗ್ಗೆ ಕೇಂದ್ರ ಸರ್ಕಾರದ ಆದೇಶದ ಮೇರೆಗೆ ಯಾವಾಗ ಮುಂದುವರೆಸುತ್ತೀರೋ ಅದನ್ನು ಮಾಡಿ. ಆದರೆ ನಾನು ಕೇಳುತ್ತಿರುವುದು ಏನು ಕಮಾನನ್ನು ನಿರ್ಮಾಣ ಮಾಡಿದ್ದೀರಿ, ಅದರಿಂದ ಎರಡೂ ಕಡೆಯಿಂದ ಬರುವಂತಹ ವಾಹನಗಳಿಗೆ ತಡೆಯಾಗುತ್ತಿದೆ. ಇಲ್ಲಿ ಸಾಕಷ್ಟು ಅಪಘಾತಗಳು ಕೂಡ ಆಗಿವೆ. ಅದನ್ನು ಯಾವಾಗ ತೆಗೆಯುತ್ತೀರಿ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಹೆಚ್.ಡಿ. ರೇವಣ್ಣ : ಇದರ ಬಗ್ಗೆ ಈಗಾಗಲೇ ಎಂ.ಓ.ಎಸ್.ಟಿ.ನಲ್ಲಿ ಸರ್ವೆ ನಡೆಯುತ್ತಿದೆ. ಆದ್ದರಿಂದ ಹೊಸ ನಿರ್ಮಾಣದ ಬಗ್ಗೆ ಒಂದು ಹೊಸ ಯೋಜನೆಯನ್ನು ರೂಪಿಸುತ್ತೇವೆ.